**EX.No.4/2020**
**RW.1**

**<u>ಸಾಕ್ಷಿ ಯನ್ನು ದಿಃ17.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಡಿಕ್ರಿದಾರರ ಪರ ಶ್ರೀ. ಟಿ ಎಂ ಎಸ್ ವಕೀಲರಿಂದ:</u>**

ನಿಪಿ.1ರ ದಾವೇಯ ಬಗ್ಗೆ ನನಗೆ ಗೊತ್ತು. ನನಗೆ 3 ರಿಂದ 6 ,8 ಮತ್ತು 9ನೇ ಎದುರುದಾರರು ನನ್ನ ಅಣ್ಣಂದಿರು. ಸದರಿಯವರಿಗೆ ಈ ದಾವೇಯ ವಿಚಾರ ಗೊತ್ತು. ಸದರಿಯವರು ನ್ಯಾಯಾಲಯದ ಪ್ರತಿ ಮುದತ್ತುಗಳಿಗೂ ಬರುತ್ತಿದ್ದರು. ನಿಪಿ.1ರ ದಾವೇ ಪೂರ್ಣ ಪ್ರಮಾಣದ ವಿಚಾರಣೆಯಾಗಿ ತೀರ್ಮಾನವಾಗಿದೆ ಎಂದರೆ ಸರಿ. ನಿಪಿ.1ರ ದಾವಾ ಆಸ್ತಿ ನನಗೆ ಗೊತ್ತು. ಸದರಿ ದಾವೇಯಲ್ಲಿ ವಾದಿಯ ಸ್ವಾಧೀನಕ್ಕೆ ತೊಂದರೆಯಾಗಬಾರದು ಎಂದು ಆದೇಶವಾಗಿತ್ತು ಎಂದರೆ ಸರಿ. ನಿಪಿ.1ರ ವಿರುದ್ದ ನಾವು ಸಲ್ಲಿಸಿದ್ದ ಅಪೀಲು ವಜಾ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ಮತ್ತು ಅರ್ಜಿದಾರರ ನಡುವೆ ಒಂದು ಕ್ರಿಮಿನಲ್ ಪ್ರಕರಣ ದಾಖಲಾಗಿ ಮುಕ್ತಾಯವಾಗಿದೆ. ಅರ್ಜಿದಾರರು ನಮ್ಮ ವಿರುದ್ಧ ಪೊಲೀಸ್ ದೂರು ನೀಡಿದ್ದರು ಎಂದರೆ ಸರಿಯಲ್ಲ.

2. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿ ಖಾಲಿ ಜಾಗ ಇರುತ್ತದೆ. ನಿಡಿ.1ರಲ್ಲಿ ನಮೂದಾಗಿರುವ ಖುರ್ಷದ್ ಉನ್ನೀಸಾ ರವರನ್ನು ನೋಡಿರುತ್ತೇನೆ. ಅದೇ ರೀತಿ ಅಬ್ದುಲ್ ನವೀ ರವರನ್ನು ನೋಡಿರುವುದಿಲ್ಲ. ಖುರ್ಷದ್ ಉನ್ನೀಸಾ ರವರ ಆಸ್ತಿಯನ್ನೇ ಅರ್ಜಿದಾರರು ದಾವೇಯಲ್ಲಿ ಕ್ಲೇಮು ಮಾಡಿದ್ದರು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆಸ್ತಿ ಹೇಗೆ ಬಂದಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಸಾಕ್ಷಿ ಮುಂದುವರೆದು, ಅವರಿಗೆ ಆಸ್ತಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ನಂಬರ್ 484/2015 ಆಗಿರುತ್ತದೆ. ಸದರಿ ಆಸ್ತಿಯ ಚೆಕ್ಕುಬಂದಿ ಗೊತ್ತೇ ಎಂದರೆ ಸಾಕ್ಷಿಯು ಅದು ತಪ್ಪು ಇರುತ್ತದೆ ಎಂದು ನುಡಿಯುತ್ತಾರೆ.

EX.**No.4/2020**
**RW.1**

**<u>ಮುಂದುವರೆದ ವಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.</u>**

*<u>( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)</u>*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.